# ಮೀಸೆ ಮಾಮ..!

ಅಪ್ಪಟ ಭಾರತೀಯನಾಗಿರುವ ರಾಮ್‌ಸಿಂಗ್ ಚವಾಣ್‌ಗೆ, ಉದ್ದನೆಯ ಮೀಸೆ ಬಿಡಬೇಕೆಂಬ ಆಸೆ. ಅಂತೆಯೇ ಬಲು ಜತನದಿಂದ ಬರೋಬ್ಬರಿ 14 ಅಡಿ (4.30 ಮೀಟರ್) ಉದ್ದನೆಯ ಮೀಸೆಯನ್ನು ಬೆಳೆಸಿಕೊಂಡಿದ್ದಾರೆ. ಇದು ಇಡೀ ವಿಶ್ವದಲ್ಲೇ ಅತೀ ಉದ್ದನೆಯ ಮೀಸೆಯೆಂಬ ಗಿನ್ನೆಸ್ ದಾಖಲೆಗೆ ಪಾತ್ರವಾಗಿದೆ.

ಈಗ 54 ವರ್ಷ ವಯಸ್ಸಿಗೆ ಕಾಲಿಟ್ಟಿರುವ ರಾಮ್‌ಸಿಂಗ್, ಮೀಸೆ ಬಿಡಲು ಆರಂಭಿಸಿದ್ದು 1970 ನೇ ಇಸವಿಯಲ್ಲಿ. 'ಆಗಿನ ಕಾಲದಲ್ಲಿ ಮೀಸೆ ಬಿಡುವುದು ನಮ್ಮೂರಲ್ಲಿ ಒಂದು ಪದ್ಧತಿಯಾಗಿತ್ತು. ಈ ಮೀಸೆ ಕಾರಣವಾಗಿಯೇ, ಕಾಲೇಜಿನಲ್ಲಿ ಸಹಪಾಠಿಗಳಿಂದ ನನಗೆ ಬಹಳ ಗೌರವ ಸಿಗುತ್ತಿತ್ತು. ಆದರೆ ಈಗಿನ ಯುವಜನತೆಗೆ ಮೀಸೆ ಬಿಡುವುದರ ಬಗ್ಗೆ ಸ್ವಲ್ಪವೂ ಆಸಕ್ತಿ ಇಲ್ಲ. ನನ್ನ ಸ್ವಂತ ಮಗನೂ ಸಹ ಮೀಸೆ ಬಿಟ್ಟಿಲ್ಲ' ಎಂದು ಇವರು ವಿಷಾದದಿಂದ ಹೇಳುತ್ತಾರೆ.

ಮದುವೆಯಾದ ಮೊದ ಮೊದಲು ಪತ್ನಿ ಆಶಾಗೆ, ಗಂಡನ ಉದ್ದನೆಯ ಮೀಸೆ ಇಷ್ಟವೇ ಆಗುತ್ತಿರಲಿಲ್ಲ. ಈ ಮೀಸೆ ಕಾರಣಕ್ಕಾಗಿ ಮನೆಯಲ್ಲಿ ಸಖತ್ ಜಗಳವೇ ನಡೆಯುತ್ತಿತ್ತು. 'ಎಲ್ಲಿಯಾದರೂ ಹೊರಗೆ ಹೊರಡುವಾಗ ಮೀಸೆಯನ್ನು ತೊಳೆದುಕೊಂಡು ತಿದ್ದಿ ತೀಡಿ ರೆಡಿಯಾಗುವುದು ತಡವಾಗುತ್ತಿತ್ತು; ಹೊರಗೆ ಹೋದಾಗ ಜನರೆಲ್ಲಾ ಇವನನ್ನು ಗುರಾಯಿಸುವುದು ನನಗೆ ಸಹ್ಯವಾಗುತ್ತಿರಲಿಲ್ಲ. ಆದರೆ ಈಗ ಈ ಮೀಸೆಯಿಂದಾಗಿಯೇ ನನ್ನ ಗಂಡನಿಗೆ ಸ್ಥಾನಮಾನ ಸಿಕ್ಕಿದೆ. ಮೀಸೆಯು ನಮ್ಮ ಕುಟುಂಬದ ಒಂದು ಭಾಗವಾಗಿ ಬಿಟ್ಟಿದೆ' ಎನ್ನುತ್ತಾಳೆ ಪತ್ನಿ ಆಶಾ.

ರಾಮ್‌ಸಿಂಗ್ ತಮ್ಮ ಉದ್ದನೆಯ ಮೀಸೆ ಸಂಭಾಳಿಸುವುದು ಸುಲಭದ ಕೆಲಸವೇನಲ್ಲ. ಪ್ರತಿ ದಿನ ಗಂಟೆಗಟ್ಟಲೆ ಅದನ್ನು ಶುಚಿಗೊಳಿಸಿ ಬಾಚುತ್ತಾರೆ. ಕೊಬ್ಬರಿ ಎಣ್ಣೆಯನ್ನು ಹಚ್ಚಿ ಮಸಾಜ್ ಮಾಡಿ 10 ದಿನಕ್ಕೊಮ್ಮೆ ತೊಳೆದುಕೊಳ್ಳುತ್ತಾರೆ. ಇದನ್ನೆಲ್ಲಾ ಮಾಡಿಕೊಳ್ಳಲು ಪತ್ನಿಯ ಸಂಪೂರ್ಣ ನೆರವು ಕೂಡ ಇದೆ. ಸ್ವಲ್ಪ ಉದ್ದವಿದ್ದಾಗ ಅದನ್ನು ಕಿವಿಯ ಸುತ್ತ ಸುತ್ತಿಕೊಂಡು ಮಲಗಿಕೊಳ್ಳುತ್ತಿದ್ದ ರಾಮ್ ಸಿಂಗ್ ತುಂಬಾ ಉದ್ದ ಬೆಳೆದ ಮೇಲೆ ಅದನ್ನು ಬಟ್ಟೆಯಿಂದ ಸುತ್ತಿ ಕುತ್ತಿಗೆಗೆ ಸುತ್ತಿಕೊಳ್ಳುತ್ತಿದ್ದಾರೆ. ಅಂದ ಹಾಗೆ ತಮ್ಮ ಮೀಸೆಯಿಂದಾಗಿಯೇ ಇವರು ಜೇಮ್ಸ್ ಬಾಂಡ್ ಸಿನಿಮಾ 'ಆಕ್ಟೋಪಸ್' ಹಾಗೂ ಅನೇಕ ಬಾಲಿವುಡ್ ಸಿನಿಮಾಗಳಲ್ಲಿ ಮಿಂಚಿದ್ದಾರೆ.

■ ವಿದ್ಯಾ ವಿ. ಹಾಲಭಾವಿ



